

ಬಿಹಾರದ ಕಿರುಗತೆ

ಗಂಡು ಶವ ಬಿಟ್ಟ ಕಣ್ಣುಗಳನ್ನು ಮುಚ್ಚಿಕೊಂಡಿತು. ಹೆಣ್ಣು ಶವ ಮಗ್ಗುಲಾಗಿ ಕೇಳಿತು: ನನ್ನ ಮದುವೆಯಾಗ್ತೀಯ?

# ಶವಾಗಾರದ ನಾಟಕ

ಮೂಲ: ನಿಶಾಂತಕೇತು

**ಕನ್ನಡಕ್ಕೆ: ಡಿ.ಎನ್. ಶ್ರೀನಾಥ್**

**ದೊ**ಡ್ಡ ಆಸ್ಪತ್ರೆಯ ಈ ಶವಾಗಾರದಲ್ಲಿ ಇಪ್ಪತ್ತಾರು ಶವಗಳು ಬಿದ್ದಿವೆ. ಆಸ್ಪತ್ರೆಯಲ್ಲಿ ಸತ್ತ ಕೆಲವು ಅನಾಥ ಶವಗಳು, ಇನ್ನು ಕೆಲವು ಮರಣೋತ್ತರ ಪರೀಕ್ಷೆಗಾಗಿ ಕಾಯುತ್ತಿರುವ ಶವಗಳು ಹಾಗೂ ಕೆಲವು ವೈದ್ಯಕೀಯ ವಿದ್ಯಾಭ್ಯಾಸವನ್ನು ಗಟ್ಟಿಗೊಳಿಸಲು ಮೀಸಲಿಟ್ಟ ಶವಗಳೂ ಅಲ್ಲಿವೆ. ಶವಗಳಲ್ಲಿ ಹೆಣ್ಣು– ಶವಗಳು, ಗಂಡು ಶವಗಳು, ಮುದಿ ಶವಗಳು, ಯುವ ಶವಗಳು, ನಡುವಯಸ್ಸಿನ ಶವಗಳು– ಹೀಗೆ ವಿಧ–ವಿಧದ ಶವಗಳು ರಾರಾಜಿಸುತ್ತಿವೆ! ಪಂಕ್ತಿಯ ಕೊನೆಯ ತುದಿಯಲ್ಲಿ ಒಂದು ಗಂಡು ಶವವಿದೆ.

ರಾತ್ರಿಯ ಎರಡು ಗಂಟೆಗೆ ಶವಾಗಾರದ ಬಾಗಿಲುಗಳು ತೆರೆದುಕೊಳ್ಳುತ್ತವೆ. ಒಂದು ಹೆಣ್ಣು ಶವವನ್ನು ಸ್ಟ್ರೆಚರ್‌ನಿಂದ ಕೆಳಗಿಳಿಸಿ ಇಪ್ಪತ್ತಾರನೇ ಶವದ ಪಕ್ಕದಲ್ಲಿ ಮಲಗಿಸಲಾಗುತ್ತದೆ. ಮೇಲೆ ಬಿಳಿ ಶವವಸ್ತ್ರವನ್ನು ಹಾಕಲಾಗುತ್ತದೆ. ಸ್ಟ್ರೆಚರ್ ತಂದ ನಾಲ್ವರು ಜೀವಂತ ನೌಕರರು ಕೂಡಲೇ ಹೊರ ಹೋಗುತ್ತಾರೆ. ಕಾವಲುಗಾರ ಬಾಗಿಲುಗಳನ್ನು ಮುಚ್ಚಿ ಬೀಗ ಹಾಕುತ್ತಾನೆ. ಹೆಣ್ಣು ಶವ, ತನ್ನ ಪಕ್ಕದಲ್ಲಿ ಒಂದು ಗಂಡು ಶವವಿರುವುದನ್ನು ನೋಡುತ್ತದೆ. ಆ ಶವ ಅದಕ್ಕೆ ತಾಕಿಕೊಂಡೇ ಮಲಗಿದೆ. ಹೆಣ್ಣು ಶವ ಕಣ್ಣು ಹೊಡೆದು ಕೇಳುತ್ತದೆ, 'ನೀನು ಹೇಗೆ ಬಂದೆ?'

'ಸತ್ತು' ಗಂಡು ಶವ ಹೇಳುತ್ತದೆ.

'ಸತ್ತೇ ಇಲ್ಲಿಗೆ ಬರೋದು, ಆದ್ರೆ ಹೇಗೆ ಸತ್ತೆ?'

'ಆತ್ಮಹತ್ಯೆ ಮಾಡಿಕೊಂಡಿದ್ದೆ.'

'ಯಾಕೆ ಆತ್ಮಹತ್ಯೆ ಮಾಡಿಕೊಂಡೆ?'

'ನನ್ನ ಹೆಂಡ್ತಿಯಿಂದ ಬೇಸತ್ತು.'

'ಅವಳೇನು ತೊಂದ್ರೆ ಕೊಟ್ಟಳು?'

'ಒಂದಾದರೆ ಹೇಳಬಹುದು. ಗಂಡಸಾಗುವುದೂ ಅಪರಾಧ. ಹೋಗ್ಲಿಬಿಡು. ನೀನು ಹೇಗೆ ಬಂದೆ?'

'ನನ್ನನ್ನು ಕೊಂದು ಹಾಕಿದರು.'

'ಯಾರು ಕೊಂದರು?'

'ಒಬ್ಬರಾದರೆ ಹೇಳಬಹುದು. ಹಳ್ಳಿಯ ಗುಂಪೇ ಕೊಂದಿತು.'

'ಯಾಕೆ ಅಂತ...'

'ನಾನು ನನ್ನ ಗಂಡನನ್ನು ಕೊಂದಿದ್ದೆ.'

'ಅವನ ಅಪರಾಧವೇನಾಗಿತ್ತು?'

'ಅವನು ನಿತ್ಯ ನನ್ನ ಮೇಲೆ ಆಪಾದನೆ ಹೊರಿಸುತ್ತಿದ್ದ. ಬೇರೆ ಗಂಡಸರನ್ನು ನಾನು ಭೇಟಿಯಾಗೋದು ಅವನಿಗಿಷ್ಟವಿರಲಿಲ್ಲ. ಒಂದು ದಿನ ನಾನು –ಹಾವೂ ಸಾಯಬೇಕು, ಕೋಲೂ ಮುರಿಯಬಾರದು– ಎಂದು ನಿಶ್ಚಯಿಸಿ ಅವನನ್ನು ಮುಗಿಸಿದೆ.'

ಗಂಡು ಶವ ಬಿಟ್ಟ ಕಣ್ಣುಗಳನ್ನು ಮುಚ್ಚಿಕೊಂಡಿತು. ಹೆಣ್ಣು ಶವ ಮಗ್ಗುಲಾಗಿ ಹೇಳಿತು, ನನ್ನ ಮದುವೆಯಾಗ್ತೀಯ?'

'ಇಲ್ಲ.'

'ಹೋಗ್ಲಿ ಪ್ರೀತಿಸ್ತೀಯಾ? ಮದುವೆ ಬೇಡ.'

'ಇಲ್ಲ.'

'ಪ್ರೀತಿಯೂ ಬೇಡ. ಜೊತೆಗೆ ಮಲಗ್ತೀಯಾ?'

ಗಂಡು ಶವ ಎದ್ದು ನಿಂತು ಕಿರುಚಿತು. 'ಸತ್ತೂ ನೆಮ್ಮದಿಯಿಲ್ಲದ ಮೇಲೆ ಎಲ್ಲಿಗೆ ಹೋಗೋದು?' ಕಡೆಗೆ ಅದು ಓಡಿ ಬಂದು ಬಾಗಿಲನ್ನು ತಟ್ಟಿತು, 'ದ್ವಾರಪಾಲಕನೇ, ಬಾಗಿಲು ತೆಗಿ.'

ದ್ವಾರಪಾಲಕ ಬಾಗಿಲು ತೆರೆದೊಡನೆಯೇ ಗಂಡು ಶವ ಹೇಳಿತು, 'ನಾನಿಲ್ಲಿ ಇರಲ್ಲ!' ನಂತರ ಅದು ಶವವಸ್ತ್ರ ಹೊದ್ದು, ಕೆಳಗಿಳಿದು ರಸ್ತೆಯಲ್ಲಿ ಓಡುತ್ತಾ ಕಣ್ಮರೆಯಾಯಿತು. ದ್ವಾರಪಾಲಕ ಪ್ರಜ್ಞೆ ತಪ್ಪಿಬಿದ್ದು ಇಹಲೋಕ ತ್ಯಜಿಸಿದ. ಅವನನ್ನು ಅದೇ ಇಪ್ಪತ್ತೇಳನೇ ಶವವಿದ್ದ ಜಾಗದಲ್ಲಿ ಮಲಗಿಸಲಾಯಿತು. ಮತ್ತೆ ಬಾಗಿಲುಗಳು ಮುಚ್ಚಲ್ಪಟ್ಟವು. ಬೀಗ ಹಾಕಲಾಯಿತು. ಹೆಣ್ಣು ಶವ, 'ಎಡಗಣ್ಣು ಹೊಡೆಯುವುದು ಅಪಶಕುನವೆಂದಾಯಿತು' ಎಂದು ಯೋಚಿಸಿ, ಈ ಬಾರಿ ಅದು ಬಲಗಣ್ಣನ್ನು ಹೊಡೆಯಿತು!